ದಿನಾಂಕಃ **23.10.2024**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ-

3 ನೇ ವಾದಿ ಮಾತ್ರ ನನಗೆ ಜಿಪಿಎ ಕೊಟ್ಟಿದ್ದಾರೆ, ಉಳಿದವರು ಯಾರು ಕೊಟ್ಟಿಲ್ಲ ಎಂದರೆ ಸರಿ. 1, 2, 4 ಮತ್ತು 5 ನೇ ವಾದಿಯವರು ಆರೋಗ್ಯವಾಗಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳು ಯಾರವು, ಅವರಿಗೆ ಹೇಗೆ ಬಂತು ಎಂಬುದರ ಬಗ್ಗೆ 1 ನೇ ವಾದಿಯಿಂದ ತಿಳಿದುಕೊಂಡಿದ್ದೇನೆ. ದಾವಾ ಪತ್ರದ ಐಟಂ ನಂಬರ್ 6 ಹುಲಿಗೆಮ್ಮ ಮತ್ತು ನಾಗಮ್ಮನ ಹೆಸರಿಗೆ ಬಂದ ಆಸ್ತಿ. 1965 ರಲ್ಲಿ ದ್ಯಾವಪ್ಪನವರು ತೀರಿದ ನಂತರ ಹುಲಿಗೆಮ್ಮ ಮತ್ತು ನಾಗಮ್ಮನ ಹೆಸರಿಗೆ ಬಂದಿರಬಹುದು. ಸದರಿ ಆಸ್ತಿ ಮೂಲತಃ ದ್ಯಾವಪ್ಪನಿಗೆ ಸೇರಿದ್ದು. ದ್ಯಾವಪ್ಪನಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿ ಮೂಲತಃ ಎಷ್ಟು ಎಕರೆ ಇತ್ತು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 110 ಒಟ್ಟು 7 ಎಕರೆ 24 ಗುಂಟೆ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಐಟಂ ನಂಬರ್ 6 ದ್ಯಾವಪ್ಪ ಬಿನ್ ಕುಂಸಿ ಕೊಟ್ರಪ್ಪ ಮತ್ತು ಅವರ ಮಗನಿಗೆ ಸೇರಿದ್ದು ಎನ್ನುವುದು ಸರಿ. ಸದರಿ ಆಸ್ತಿಯನ್ನು ದ್ಯಾವಪ್ಪ ಬಿನ್ ಕುಂಸಿ ಕೊಟ್ರಪ್ಪ ಹಾಗೂ ಅವರ ಮಗ 1946 ರಲ್ಲಿ ರುದ್ರಪ್ಪ ಬಿನ್ ಮರಿಗೌಡರ ಕೆಂಚಪ್ಪ ಎನ್ನುವವರಿಗೆ ಮಾರಾಟ ಮಾಡಿದ ವಿಷಯ ಗೊತ್ತಿಲ್ಲ. ಸದರಿ ದಾಖಲೆ ನೋಂದಣಿ ಸಹ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಕ್ರಯಪತ್ರದಂತೆ 500/- ರೂಗೆ ಮಾರಾಟ ಮಾಡಿರುವುದು ನನಗೆ ಗೊತ್ತಿಲ್ಲ (ಹಿಸ್ಸಾ ನಂಬರ್ 985/1945-46). ಸದರಿ ಕ್ರಯಪತ್ರವನ್ನು ನಾನು ನೋಡಿಲ್ಲ. ಮಾರಾಟ ಮಾಡಿ ಪುನಃ ದ್ಯಾವಪ್ಪ ಬಿನ್ ಕುಂಸಿ ಕೊಟ್ರಪ್ಪ ಮತ್ತು ಅವರ ಮಗ ಖರೀದಿ ಮಾಡಿದರು ಎನ್ನುವುದು ಗೊತ್ತಿಲ್ಲ. ದಿಃ 03.04.1950 ರಂದು ಎಸ್ ಆರ್ ನಂಬರ್ 10/1950-51 ರಂತೆ ಖರೀದಿ ಮಾಡಿರುತ್ತಾರೆ ಎನ್ನುವುದು ಗೊತ್ತಿಲ್ಲ. ವಾದಿಯರು ಸದರಿ ಕ್ರಯಪತ್ರದ ಬಗ್ಗೆ ನನಗೆ ಹೇಳಿಲ್ಲ, ನಾನೂ ತಿಳಿದುಕೊಂಡಿಲ್ಲ.

ನಾಗಮ್ಮನ ಕುಟುಂಬಕ್ಕೆ ಸರ್ವೆ ನಂಬರ್ 110 ರಲ್ಲಿ 1 ಎಕರೆ 36 ಗುಂಟೆ ಮತ್ತು 1 ಎಕರೆ 36 ಗುಂಟೆ ಇದೆ. ಸರ್ವೆ ನಂಬರ್ 151/6 ರಲ್ಲಿ 38 ಗುಂಟೆ, 151/7 ರಲ್ಲಿ 29 ಗುಂಟೆ, 151/8 ರಲ್ಲಿ 27 ಗುಂಟೆ ಇದೆ. ಸರ್ವೆ ನಂಬರ್ 35/1 ರಲ್ಲಿ 1 ಎಕರೆ 31 ಗುಂಟೆ ಇದೆ. ಅದನ್ನು ಹೊರತುಪಡಿಸಿ ಅವರ ಕುಟುಂಬಕ್ಕೆ ಬೇರೆ ಆಸ್ತಿಗಳಿಲ್ಲ. ಸರ್ವೆ ನಂಬರ್ 139/3 ಸಹ ನಾಗಮ್ಮನ ಕುಟುಂಬಕ್ಕೆ ಸೇರಿದ್ದು ಎನ್ನುವುದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 190/3 ನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ. ಸದರಿ ಆಸ್ತಿಯೂ ಸಹ ನಾಗಮ್ಮನ ಒಟ್ಟು ಕುಟುಂಬದ ಆಸ್ತಿ ಎನ್ನುವುದು ಸರಿಯಲ್ಲ.

ಸರ್ವೆ ನಂಬರ್ 151/1 ರಲ್ಲಿ ನಾಗಮ್ಮನಿಗೆ ಆಸ್ತಿ ಇದೆ. ಅದು 11 ಗುಂಟೆ ಮಾತ್ರ ಇದೆ. ಸರ್ವೆ ನಂಬರ್ 151/1 ರಲ್ಲಿ ಒಟ್ಟು 1 ಎಕರೆ 17 ಗುಂಟೆ ಇದೆ ಎನ್ನುವುದು ಸರಿಯಲ್ಲ. ಸರ್ವೆ ನಂಬರ್ 151/1 ರ ಪಹಣಿಯನ್ನು ನಾನು ನೋಡಿದ್ದೇನೆ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎನ್ನುವುದು ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ನಾನು ದಾಖಲೆಯನ್ನು ಹಾಜರುಪಡಿಸಿಲ್ಲ

ಎನ್ನುವುದು ಸರಿ. ಸದರಿ ಆಸ್ತಿಗಳ ಮ್ಯುಟೇಷನ್ ನಂಬರ್ ಗಳನ್ನು ಹಾಜರುಪಡಿಸಿದ್ದೇನೆ. ಯಾವುದೇ ಮ್ಯುಟೇಷನ್ ಹಾಜರುಪಡಿಸದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹುಲುಗಮ್ಮ ಕೋಂ ದ್ಯಾವಣ್ಣ, ಮಲ್ಲಮ್ಮ ಕೋಂ ಕೊಟ್ರಪ್ಪ ಮತ್ತು ಅವರ ದಾಯಾದಿಗಳು, ಕುಂಸಿ ರಾಮಪ್ಪ ಬಿನ್ ಬಸಪ್ಪ, ಕುಂಸಿ ಭರ್ಮಪ್ಪ ಮತ್ತು ಕುಂಸಿ ಧರ್ಮಕ್ಕ ಅವರ ಆಸ್ತಿಗಳನ್ನು ನೋಂದಾಯಿತವಾಗಿ ವಿಭಾಗ ಮಾಡಿಕೊಂಡರು ಎನ್ನುವುದು ನನಗೆ ನೆನಪಿಲ್ಲ. ಸದರಿ ವಿಷಯವನ್ನು ವಾದಿಯರು ನನಗೆ ತಿಳಿಸಿಲ್ಲ. ನನಗೆ ಖುದ್ದಾಗಿ ಸಹ ಗೊತ್ತಿಲ್ಲ. ಸರ್ವೆ ನಂಬರ್ 110/1 ರಲ್ಲಿ 7 ಎಕರೆ 24 ಗುಂಟೆಯನ್ನು ಯಾರ್ಯಾರು ಹಿಸ್ಸೆ ಮಾಡಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ಹುಲಿಗೆವ್ವನಿಗೆ ಸದರಿ ಸರ್ವೆ ನಂಬರ್ ನಲ್ಲಿರುವ 7 ಎಕರೆ 24 ಗುಂಟೆಯ ಉತ್ತರ ಭಾಗದ ಪೈಕಿ 3 ಎಕರೆ 32 ಗುಂಟೆ ಬಂದಿದೆ ಎನ್ನುವುದು ಸರಿ. ಅದರಲ್ಲಿ ಖುಷ್ಕಿ, ಭಾಗಾಯ್ತು, ತರಿ ಎಂದು ಸರ್ವೆ ನಂಬರ್ 151/1 ರಲ್ಲಿ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ 1 ಎಕರೆ 8 ಗುಂಟೆ ಖುಷ್ಕಿ 7 ಗುಂಟೆ ತರಿ, 2 ಗುಂಟೆ ಭಾಗಾಯ್ತು ಎಂದು ನಮೂದಿಸಿರುವುದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಪೂರ್ವ ಭಾಗದ 24 ಗುಂಟೆ ಖುಷ್ಕಿ 4 ಗುಂಟೆ ತರಿ, 1 ಗುಂಟೆ ಭಾಗಾಯ್ತು ಹುಲುಗವ್ವನ ಹಿಸ್ಸೆಗೆ ಬಂದಿದೆ ಎನ್ನುವುದು ನನಗೆ ಗೊತ್ತಿಲ್ಲ.

ಸರ್ವೆ ನಂಬರ್ 139/3 ರಲ್ಲಿ ಎಷ್ಟು ಜಮೀನಿದೆ ಎಂದು ತಿಳಿದುಕೊಂಡಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ 2 ಎಕರೆ 26 ಗುಂಟೆ ಇದೆ ಅದೂ ಸಹ ನಾಗಮ್ಮ ಮತ್ತು ಹುಲುಗಮ್ಮನ ಆಸ್ತಿಗಳು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನ ದಕ್ಷಿಣ ಭಾಗದ 14 ಗುಂಟೆ ಹುಲುಗವ್ವ ಎನ್ನುವವರಿಗೆ ಬಂದಿರುವುದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 135 ರಲ್ಲಿ ಅಂದರೆ 1 ಎಕರೆ 31 ಗುಂಟೆಯಲ್ಲಿ ಭಾಗಾಯ್ತು ಎಷ್ಟಿದೆ, ತರಿ ಎಷ್ಟಿದೆ ಎಂದು ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಖುಷ್ಕಿ 36 ಗುಂಟೆ, ತರಿ 31 ಗುಂಟೆ ಇದೆ ಎನ್ನುವುದು ಸರಿಯಲ್ಲ. ಸದರಿ ಸರ್ವೆ ನಂಬರ್ ನ ಉತ್ತರ ಭಾಗದ ಭಾಗಾಯ್ತು 18 ಗುಂಟೆ, ತರಿ 17 ಗುಂಟೆ ಹುಲುಗವ್ವ ಎನ್ನುವವರ ಹೆಸರಿಗೆ ಬಂದಿದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ಗಳನ್ನು ಹೊರತುಪಡಿಸಿ ಒಂದು ಮನೆ, ಒಂದು ಖಾಲಿ ಜಾಗ ಇದೆ ಎನ್ನುವುದು ಸರಿಯಲ್ಲ. ನಿಂಬೆಗೊಂದಿ ಗ್ರಾಮದಲ್ಲಿ ಖಾನೇಷುಮಾರಿ ನಂಬರ್ 24 ರಲ್ಲಿ 12 ಅಂಕಣದ ಮನೆ ಇತ್ತು ಎನ್ನುವುದು ಸರಿಯಲ್ಲ. ಸದರಿ ಮನೆಯ ಪೂರ್ವ ಭಾಗದ ಅರ್ಧ ಮನೆ ಹುಲುಗಮ್ಮನಿಗೆ ಬಂದಿದೆ ಎನ್ನುವುದು ಸರಿಯಲ್ಲ. ಸದರಿ ಗ್ರಾಮದ ಖಾನೇಷುಮಾರಿ ನಂಬರ್ 106 ಉತ್ತರ ಭಾಗದ ಅರ್ಧ ಸೈಟ್ ಹುಲುಗವ್ವನಿಗೆ ಬಂದಿದೆ ಎನ್ನುವುದು ಸರಿಯಲ್ಲ.

ಹುಲುಗವ್ವನ ಗಂಡನ ಹೆಸರು ದ್ಯಾವಪ್ಪ ಎಂದರೆ ಸರಿ. ದ್ಯಾವಪ್ಪನಿಗೂ ಸಹ ತಮ್ಮನಿರಲಿಲ್ಲ. ದ್ಯಾವಪ್ಪನಿಗೆ ಕೊಟ್ರಪ್ಪ ಎಂಬ ತಮ್ಮ ಇದ್ದರು ಎನ್ನುವುದು ಸರಿಯಲ್ಲ. ಮಲ್ಲಮ್ಮ ಯಾರೆಂದು ನನಗೆ ಗೊತ್ತಿಲ್ಲ. ದ್ಯಾವಪ್ಪನ ತಮ್ಮನ ಹೆಂಡತಿಯೇ ಮಲ್ಲಮ್ಮ ಎನ್ನುವುದು ಗೊತ್ತಿಲ್ಲ. ದಿಃ 10.06.1963 ರಲ್ಲಿ ಆದ ಹಿಸ್ಸೆಯಲ್ಲಿ ಕೊಟ್ರಪ್ಪನ ಹೆಂಡತಿ ಮಲ್ಲಮ್ಮ ಸಹ ಒಬ್ಬ ಹಿಸ್ಸೆದಾರರು ಎನ್ನುವುದು ನನಗೆ ನೆನಪಿಲ್ಲ. ಮಲ್ಲಮ್ಮನಿಗೆ ಹಿಸ್ಸೆಯಂತೆ ಯಾವ ಆಸ್ತಿಗಳು ಹೋದವು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 110/1 ರಲ್ಲಿ ಇದ್ದ 7 ಎಕರೆ 24 ಗುಂಟೆ ಪೈಕಿ ದಕ್ಷಿಣ ಭಾಗದ 3 ಎಕರೆ 32 ಗುಂಟೆ ಮಲ್ಲಮ್ಮನಿಗೆ ಬಂತು ಎನ್ನುವುದು ನನಗೆ ನೆನಪಿಲ್ಲ. ಸರ್ವೆ ನಂಬರ್

159/1 ರಲ್ಲಿ 1 ಎಕರೆ 17 ಗುಂಟೆ ಪೈಕಿ 24 ಗುಂಟೆ ಖುಷ್ಕಿ 3 ಗುಂಟೆ ತರಿ, 1 ಗುಂಟೆ ಭಾಗಾಯ್ತು ಮಲ್ಲಮ್ಮನ ಹೆಸರಿಗೆ ಬಂತು ಎನ್ನುವುದು ಗೊತ್ತಿಲ್ಲ. ಸರ್ವೆ ನಂಬರ್ 139/3 ರಲ್ಲಿ ಇದ್ದ ಆಸ್ತಿಯ ದಕ್ಷಿಣದ ಕಡೆ 14 ಗುಂಟೆ ಮಲ್ಲಮ್ಮನಿಗೆ ಬಂತು ಎನ್ನುವುದು ಗೊತ್ತಿಲ್ಲ. ಸರ್ವೆ ನಂಬರ್ 35 ರಲ್ಲಿ ದಕ್ಷಿಣ ಭಾಗದ 18 ಗುಂಟೆ ಭಾಗಾಯ್ತು, 18 ಗುಂಟೆ ತರಿ ಮಲ್ಲಮ್ಮನ ಹೆಸರಿಗೆ ಬಂತು ಎನ್ನುವುದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಹುಲುಗಮ್ಮ ನಾಗಮ್ಮನ ಹೆಸರಿಗೆ ಇತ್ತು ಎನ್ನುತ್ತಾರೆ. ಅದೇ ರೀತಿ ಮನೆಯಲ್ಲಿ ಅರ್ಧ ಹಿಸ್ಸೆ ಖಾನೇಷುಮಾರಿ ನಂಬರ್ 24 ಪಶ್ಚಿಮ ಭಾಗದ ಅರ್ಧ ಹಿಸ್ಸೆ ಮತ್ತು ಸೈಟ್ ಸಂಖ್ಯೆ 106 ರಲ್ಲಿ ದಕ್ಷಿಣ ಭಾಗದ ಅರ್ಧ ಹಿಸ್ಸೆ ಮಲ್ಲಮ್ಮನಿಗೆ ಬಂತು ಎನ್ನುವುದು ಸರಿಯಲ್ಲ.

ಖಾನೇಷುಮಾರಿ ನಂಬರ್ 24 ಮತ್ತು 106 ದಾಖಲೆಗಳನ್ನು ನಾನು ನೋಡಿಲ್ಲ. ಈಗ ಸದರಿ ಆಸ್ತಿಗಳಲ್ಲಿ ಯಾರಿದ್ದಾರೆ ಎಂದು ನನಗೆ ಹೇಳಲಿಕ್ಕಾಗುವುದಿಲ್ಲ. ಅದೇ ರೀತಿ ಸರ್ವೆ ನಂಬರ್ 139/3 ರಲ್ಲಿ ದಕ್ಷಿಣ ಭಾಗದ 26 ಗುಂಟೆ ಖುಷ್ಕಿ ಪಿ ಸಿ ರಾಮಪ್ಪ ಎನ್ನುವವರಿಗೆ ಬಂದಿದೆ ಎಂದರೆ ಸಾಕ್ಷಿ ಅವರೇ ಬೇರೆ ಎನ್ನುತ್ತಾರೆ. ಅದೇ ಸರ್ವೆ ನಂಬರ್ ನಲ್ಲಿ ಉತ್ತರ ಭಾಗದ 26 ಗುಂಟೆ ಕುಂಸಿ ಭರ್ಮಕ್ಕ ನಿಗೆ ಬಂದಿದೆ ಎಂದರೆ ಸಾಕ್ಷಿ ಅವರೇ ಬೇರೆ ಎನ್ನುತ್ತಾರೆ. ಕುಂಸಿ ಭರ್ಮಕ್ಕ ಯಾರೆಂದು ನನಗೆ ಗೊತ್ತಿಲ್ಲ. ಅವರೂ ಸಹ ದಾಯಾದಿಗಳಾಗಿರುವುದರಿಂದ ಅವರಿಗೂ ಸಹ ಹಿಸ್ಸೆ ಹೋಗಿದೆ ಎನ್ನುವುದು ಸರಿಯಲ್ಲ. ಹುಲುಗಮ್ಮ ಮತ್ತು ನಾಗಮ್ಮನ ಹೆಸರಿಗೆ ಇದ್ದ ಪಹಣಿಗಳನ್ನು ಮಾತ್ರ ಹಾಜರುಪಡಿಸಿದ್ದೇನೆ, ಉಳಿದ ಪಹಣಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ 139/3, 151/1, ಖಾನೇಷುಮಾರಿ ನಂಬರ್ 24 ಮತ್ತು 106 ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದರೂ ಸಹ ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎನ್ನುವುದು ಸರಿಯಲ್ಲ.

ನಾಗಮ್ಮ ಮತ್ತು ಲೋಕಪ್ಪ ರವರ ಮೂಲ ಊರು ಹಿಂದೆ ಹೊನ್ನಾಳಿ ತಾಲ್ಲೂಕಿನ ಪ್ರಸ್ತುತ ನ್ಯಾಮತಿ ತಾಲ್ಲೂಕಿನ ಕಾಡತಿಮ್ಮನಹಳ್ಳಿ ಎನ್ನುವುದು ಸರಿಯಲ್ಲ. ನಾಗಮ್ಮ ಮತ್ತು ಲೋಕಪ್ಪ ಅಕ್ಕತಮ್ಮ ಎನ್ನುವುದು ಸರಿ. ನಾಗಮ್ಮನಿಗೆ ಮಕ್ಕಳಿಲ್ಲ ಎನ್ನುವುದು ಸರಿ. ನಾಗಮ್ಮನಿಗೆ ಹಿಸ್ಸೆಯಿಂದ ಬಂದ ಆಸ್ತಿಗಳು ಅವರ ಗಂಡನ ಕಡೆಯಿಂದ ಬಂದ ಆಸ್ತಿಗಳು ಎಂದರೆ ಸಾಕ್ಷಿ ಅವರ ಮಾವನ ಕಡೆಯಿಂದ ಬಂದ ಆಸ್ತಿಗಳು ಎನ್ನುತ್ತಾರೆ. ನಾಗಮ್ಮನ ಗಂಡ ಕೊಟ್ರಪ್ಪ ಎನ್ನುವುದು ಸರಿ. ಕೊಟ್ರಪ್ಪನ ತಂದೆ ದ್ಯಾವಪ್ಪ ಎಂದರೆ ಸರಿ. ಹುಲುಗಮ್ಮ ದ್ಯಾವಪ್ಪನ ಹೆಂಡತಿ. ಹುಲುಗಮ್ಮನಿಗೆ ಒಬ್ಬನೇ ಮಗ. ಅವರಿಗೆ 3 ಜನ ಮಕ್ಕಳಿದ್ದರೂ ಸಹ ನಾನು ಒಬ್ಬನೇ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರಿಗೆ ಸಾವಮ್ಮ, ಕೊಟ್ರಪ್ಪ ಮತ್ತು ದುರ್ಗಪ್ಪ ಎಂಬ 3 ಜನ ಮಕ್ಕಳು ಎಂದರೆ ಸರಿಯಲ್ಲ. ಲೋಕಪ್ಪ ಮತ್ತು 1 ನೇ ವಾದಿಯ ಮೂಲ ವಂಶವೃಕ್ಷವನ್ನು ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ, ಆದರೆ ಪ್ರಮಾಣ ಪತ್ರದಲ್ಲಿ ಬರೆದಿದ್ದೇನೆ ಎನ್ನುತ್ತಾರೆ. ಹುಲುಗಮ್ಮ ಮತ್ತು ದ್ಯಾವಪ್ಪನಿಗೆ ದುರ್ಗಪ್ಪ ಎನ್ನುವ ಮಗ ಇದ್ದ ಎಂದರೆ ಸರಿ. ದುರ್ಗಪ್ಪ ಅವಿವಾಹಿತನಾಗಿ ತೀರಿಕೊಂಡರು ಎನ್ನುವುದು ನನಗೆ ಗೊತ್ತಿಲ್ಲ. ಸಾವಮ್ಮ ಯಾರೆಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಸಾವಿತ್ರಮ್ಮ ಯಾರೆಂದು ನನಗೆ ನೆನಪಿಲ್ಲ. ಸಾವಮ್ಮ, ಸಾವಂತ್ರಮ್ಮ ಇಬ್ಬರೂ ಒಬ್ಬರೇ ಎನ್ನುವುದು ಸುಳ್ಳು. ಸಾವಮ್ಮ ಸಹ

ದ್ಯಾವಪ್ಪ ಮತ್ತು ಹುಲುಗಮ್ಮನ ಮಗಳು ಎನ್ನುವುದು ಸರಿಯಲ್ಲ. ಅವರ ಮಗಳೆಂದು ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾವಮ್ಮನಿಗೆ ಬಸಪ್ಪ ಎಂಬ ಗಂಡ ಇದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸಾವಮ್ಮನಿಗೆ ಇಬ್ಬರು ಗಂಡು ಮಕ್ಕಳು 4 ಜನ ಹೆಣ್ಣು ಮಕ್ಕಳು ಇದ್ದರು ಎನ್ನುವುದು ನನಗೆ ಗೊತ್ತಿಲ್ಲ. 6 ಮತ್ತು 7 ನೇ ಪ್ರತಿವಾದಿಯರು ಸಾವಮ್ಮನ ಮಕ್ಕಳು ಎನ್ನುವುದು ಸರಿಯಲ್ಲ. ಸಾವಮ್ಮನನ್ನು ನೆಲವಾಗಿಲಿಗೆ ಕೊಟ್ಟಿದ್ದರಿಂದ ಅವರು ನೆಲವಾಗಿಲಿನಲ್ಲಿ ವಾಸವಾಗಿದ್ದರು ಎನ್ನುವುದು ಸರಿಯಲ್ಲ. ಸಾವಮ್ಮನ ಉಳಿದ 4 ಜನ ಮಕ್ಕಳು ಈಗ ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರಿಗೆ ಗೌರಮ್ಮ, ಮಹಾದೇವಿ, ಶಾಂತ, ಜಯಕಲಾ ಎಂಬ 4 ಜನ ಹೆಣ್ಣು ಮಕ್ಕಳಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಹೆಣ್ಣು ಮಕ್ಕಳನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸದೇ ಇರುವುದರಿಂದ ನನ್ನ ದಾವೆ ಊರ್ಜಿತವಲ್ಲ ಎನ್ನುವುದು ಸರಿಯಲ್ಲ. 1 ನೇ ವಾದಿ ಸಾವಮ್ಮನ ಮಕ್ಕಳ ಬಗ್ಗೆ ನನಗೆ ಹೇಳಿಲ್ಲ.

ದ್ಯಾವಪ್ಪನಿಗೆ ಕೊಟ್ರಪ್ಪ ಎಂಬ ತಮ್ಮ ಇದ್ದರು ಎನ್ನುವುದು ಸರಿಯಲ್ಲ. ಕೊಟ್ರಪ್ಪನಿಗೆ ಹಿರಿಯಮ್ಮ ಎಂಬ ಮಗಳಿದ್ದರು ಎಂದರೆ ಸರಿಯಲ್ಲ. ಹಿರಿಯಮ್ಮನ ಗಂಡನ ಹೆಸರು ನಿಂಗಪ್ಪ ಎಂದರೆ ಸಾಕ್ಷಿ ಅವರು ಬೇರೆ ಎನ್ನುತ್ತಾರೆ. ಹಿರಿಯಮ್ಮನಿಗೆ ಲಕ್ಷ್ಮಮ್ಮ ಎಂಬ 4 ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿ. ಹಿರಿಯಮ್ಮನನ್ನು ನಾವು ಪಾರ್ಟಿ ಮಾಡಿದ್ದೇವೆ. ಹಿರಿಯಮ್ಮನ ಮಕ್ಕಳು ಯಾರ್ಯಾರು ಎಂದು ನಾನು ತಿಳಿದುಕೊಂಡಿಲ್ಲ. ದಾವೆಯಲ್ಲೂ ಸಹ ಆ ಬಗ್ಗೆ ಬರೆದಿಲ್ಲ. ಈ ಹಿಂದೆ ಆದ 10.06.1963 ರ ಹಿಸ್ಸಾ ಪತ್ರದಲ್ಲಿ ದ್ಯಾವಪ್ಪನೆ ಹೆಂಡತಿ ಮಲ್ಲಮ್ಮ ಎಂದು ನಮೂದಾಗಿದೆ ಎನ್ನುವುದು ನೆನಪಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದಾರೆ, ನೀಡಲಾಗಿದೆ)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಕಾರಿಪುರ.